**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಮಳವಳ್ಳಿ**

**ಸಿ.ಸಿ ನಂ. 394/2016**

ಫ್ರಾಸಾ – 4 ಚಾಸಾ – 6

ಸಾಕ್ಷಿಯನ್ನು ದಿಃ 11.12.2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ಕುಮಾರಸ್ವಾಮಿ |
| ತಂದೆಯ / ಗಂಡನ ಹೆಸರು | ಲೇಟ್ ಮಂಜಯ್ಯ |
| ವಯಸ್ಸು | 52 |
| ಉದ್ಯೋಗ | ಕೂಲಿ |
| ವಾಸ | ಶೆಟ್ಟಳ್ಳಿ ಗ್ರಾಮ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ**

1. ಈಗ ಒಂದು ದಾಖಲಾತಿ ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಅಮಾನತು ಮಹಜರ್ ಆಗಿದ್ದು ಅದನ್ನು ನಿ.ಪಿ–6 ಎಂದು ಗುರುತಿಸಲಾಯಿತು. ನಿ.ಪಿ–6 ರಲ್ಲಿ ತನ್ನ ಸಹಿಯನ್ನು ನಿ.ಪಿ–6(ಎ) ಎಂದು ಗುರುತಿಸಲಾಯಿತು. ನಿ.ಪಿ–6 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ–6 ರ ಸಂಗತಿಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ತಲಾ 1 ಗ್ರಾಂ ತೂಕದ ಎರಡು ಚಿನ್ನದ ತಾಳಿ , 4 ಬೆಳ್ಳಿ ಬಳೆಗಳು 45 ಗ್ರಾಂ, ಬೆಳ್ಳಿ ಕಾಲು ಚೈನು 1 ಜೊತ 61 ಗ್ರಾಂ , 1 ಜೊತೆ ಬೆಳ್ಳಿ ಕಾಲುಂಗುರ 28 ಗ್ರಾಂ , 32 ಇಂಚಿನ ಸೋನಿ ಎಲ್ ಇ ಡಿ ಟಿವಿ , 3 ಗ್ರಾಂ

ತೂಕ ಚಿನ್ನದ ಉಂಗುರು , 25 ಗ್ರಾಂ ಚಿನ್ನದ ನೆಕ್ಲಸ್ , 22 ಗ್ರಾಂ ತೂಕ ಚಿನ್ನದ ಸರ , 35 ಗ್ರಾಂ ತೂಕ ಚಿನ್ನದ ಸರ , 1 ಜೊತೆ ಚಿನ್ನದ ಲಕ್ಷಿ ಓಲೆ 6 ಗ್ರಾಂ, ಚಿನ್ನದ ಓಲೆ ಜುಮಕಿ 8 ಗ್ರಾಂ , 1 ಜಿತೆ ಚಿನ್ನದ ಓಲೆ ಜುಮಕಿ 5 ಗ್ರಾಂ, ಒಂದು ಚಿನ್ನದ ಉಂಗುರ 5 ಗ್ರಾಂ , 6 ಗ್ರಾಂ ಚಿನ್ನದ ಉಂಗರ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಶ್ರೀ ಸ ಸ ಅ ರವರು ಅನುಮತಿಯನ್ನು ಕೋರುತ್ತಾರೆ. ಕಡತವನ್ನು ಪರೀಕ್ಷಿಸಲಾಗಿ ಸಾಕ್ಷಿಯು ಮಹಜರುದಾರನಾಗಿದ್ದು ತನ್ನ ಮಹಜರಿಗೆ ವಿರುದ್ಧ ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಆದರಿಂದ ಅವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದ</u>**

2. ದಿನಾಂಕ 6-9-2015 ಮಧ್ಯಾಹ್ನ 12.45 ರಿಂದ 3-00 ಗಂಟೆಯವರೆಗೆ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಪೊಲೀಸರು ನಮ್ಮ ಗ್ರಾಮಕ್ಕೆ ಬಂದು ಚಾಸ 7 , 8 ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ-6 ರಂತೆ ನನ್ನ ಸಮಕ್ಷಮ ತಲಾ 1 ಗ್ರಾಂ ತೂಕದ ಎರಡು ಚಿನ್ನದ ತಾಳಿ , 4 ಬೆಳ್ಳಿ ಬಳೆಗಳು 45 ಗ್ರಾಂ, ಬೆಳ್ಳಿ ಕಾಲು ಚೈನು 1 ಜೊತ 61 ಗ್ರಾಂ , 1 ಜೊತೆ ಬೆಳ್ಳಿ ಕಾಲುಂಗುರ 28 ಗ್ರಾಂ , 32 ಇಂಚಿನ ಸೋನಿ ಎಲ್ ಇ ಡಿ ಟಿವಿ , 3 ಗ್ರಾಂ ತೂಕ ಚಿನ್ನದ ಉಂಗುರು , 25 ಗ್ರಾಂ ಚಿನ್ನದ ನೆಕ್ಲಸ್ , 22 ಗ್ರಾಂ ತೂಕ ಚಿನ್ನದ ಸರ , 35 ಗ್ರಾಂ ತೂಕ ಚಿನ್ನದ ಸರ , 1 ಜೊತೆ ಚಿನ್ನದ ಲಕ್ಷಿ ಓಲೆ 6 ಗ್ರಾಂ, ಚಿನ್ನದ ಓಲೆ ಜುಮಕಿ 8 ಗ್ರಾಂ , 1 ಜಿತೆ ಚಿನ್ನದ ಓಲೆ

ಜುಮಕಿ 5 ಗ್ರಾಂ, ಒಂದು ಚಿನ್ನದ ಉಂಗುರ 5 ಗ್ರಾಂ , 6 ಗ್ರಾಂ ಚಿನ್ನದ ಉಂಗರ ಒಂದು ಟಿವಿ ಮತ್ತು ಟಿವಿ ಶೋಕೆಶ್ ಮತ್ತು ಶೊಕೆಸ್ ನ ಗಾಜಿನ ಚೂರುಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ದಿನಾಂಕ 6.9.2018 ರಂದು ಈ ಮೇಲೆ ಓದಿ ಹೇಳಿದ ರೀತಿ ಪೊಲೀಸರಿಗೆ ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೇಳೀಕೆಯನ್ನು ಒಪ್ಪದ ಕಾರಣ ನಿ.ಪಿ–7 ಎಂದು ಗುರುತಿಸಲಾಯಿತು ನಾನು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ